ಬೆಂಗಳೂರಿನಲ್ಲಿ ಕೈಗಾರಿಕಾ ಕಲ್ಮಶಗಳಿಂದ ಪರಿಸರದ ನಾಶ

470 - ಮ್ ನ್ಯ ಬೃಹತ್ ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆ ಗೆ ದಯವಿಟ್ಟು ಉತ್ತರಿಸುವರೆ?

ಅ) ಬೇ ೂರು ವಿವಿಧ ಕೈಗಾರಿಕಾ ಕಲ್ಮಶ ಕೊಳೆಯುತ್ತಾ ಬಂದಿದ್ದು ಇದು ನಾಗರೀಕ ಬ ಗೆ ವಿನಾಶಕಾರಿ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇ ಶ ವಿಲೇವಾರಿಗೆ ಪರಿಸರ ಇಲಾಖೆಯಿದ ಏನಾದರೂ ಸೂಚನೆಗಳನ್ನು ಕಳಿಸಿದೆಯೇ? ಸರ ವಿಲೇವಾರಿಗೆ ಬೇರೆ ಏನಾದರು ಮಾರ್ಗಗಳನ್ನು ಸರ್ಕಾರ ಯೋಚಿಸಿದೇಯೇ?

ಇ) ಕೈಗಾರಿಕೆಗೆ ನೀಡುವ ಸಬ್ಸಿಡಿ ಬಾಕಿ 1995-96ನೇ ಸಾಲಿನಲ್ಲಿ ಏಷ್ಟಿದೆ? ಏಷ್ಟು ಬಿಡುಗಡೆ ಮಾಡಲಾಗಿದೆ?

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ಬಂದಿದೆ.

ಆ) ಪರಿಸರ ಮಾಲಿನ್ಯವನ್ನು ನಿಯಂತ್ರಿಸಲು ಹಾಗೂ ನಿವಾರಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಕಾಯ್ದೆ 1974, ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1 ಹಾಗೂ ಪರಿಸರ (ಸಂರಕ್ಷಣಾ) ಕಾಯ್ದೆ 1986ರ ಕೆಲವು ನಿಯಮಗಳನ್ನು ಜಾರಿಗೊಳಿಸುತ್ತದೆ.

ಮಂಡಳಿಯು ಉದ್ದಿಮೆಗಳಿಗೆ ಕಾನೂನಡಿಯಲ್ಲಿ ಅವುಗಳಿಂದ ಬರುವ ಕಲುಷಿತನೀರು ಹಾಗೂ ವಾಯು ಮಾಲಿನ್ಯವನ್ನು ಶುದ್ಧಗೊಳಿಸುವಂತೆ ಆದೇಶ ನೀಡಿವೆ ಹಾಗೂ ತಪ್ಪಿದ್ದಲ್ಲಿ ಕಾನೂನು ರೀತಿ ಕ್ರಮವನ್ನು ಜರುಗಿಸಲಾಗುವುದು. ಆ ಅಪಕಾರಿ ಹಾಗೂ ಘನ ವಸ್ತುಗಳ ಸೂಕ್ತ ವಿಲೇವಾರಿಗೆ ಮಂಡಳಿಯಿಂದ ಅನುಮತಿ ಪಡೆಯಬೇಕೆಂದು ಆದೇಶ ನೀಡಿದೆ. ಈ ವಸ್ತುಗಳ ವಿಲೇವಾರಿಗಾಗಿ ಸೂಕ್ತ ಜಾಗಗಳನ್ನು ಗುರುತಿಸಲಾಗುತ್ತಿದೆ, ಹಾಗೂ ಮಂಡಳಿಯು ಪ್ರತ್ಯೇಕವಾಗಿ ಒಂದು ವಿಭಾಗವನ್ನು ರಚಿಸಲಾಗುತ್ತಿದೆ.

ರಾಜ್ಯದಲ್ಲಿರುವ ಕಾರ್ಖಾನೆಗಳಿಂದ ಉತ್ಪತ್ತಿಯಾಗುವ ಶೇಖಡ50ಭಾಗದಷ್ಟು ಅಪಾಯಕಾರಿ ವಸ್ತು ಬೆಂಗಳೂರು ನಗರದಲ್ಲಿ ಉತ್ಪತ್ತಿಯಾಗುವುದರಿಂದ ಬೆಂಗಳೂರಿನಲ್ಲಿ ಈ ವಸ್ತುಗಳ ವಿಲೇವಾರಿಗೆ ಆದ್ಯತೆ ನೀಡಲಾಗಿದೆ.

ಇ) 1995-96ನೇ ಸಾಲಿನಲ್ಲಿ ಸಬ್ಸಿಡಿ ಬಗ್ಗೆ 40 ಕೋಟಿ ರೂ. ಬಿಡುಗಡೆ ಮಾಡಲಾಗಿದ್ದು 19.83 ಕೋಟಿ ರೂ. ಸಹಾಯಧನ ನೀಡುವುದು ಇನ್ನು ಬಾಕಿ ಇರುತ್ತದೆ.